# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 35/2021**

**ಕಲಂ 299 ರಡಿಯಲ್ಲಿ ಸಾಕ್ಷಿವಿಚಾರಣೆಃ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 04-07-2023 ರಂದು ಪ್ರಮಾಣ ಮಾಡಿಸಲಾಯಿತು

| | | | |
|---|---|---|---|
| ಸಾಕ್ಷಿಯ ಹೆಸರು | ಃ ಶ್ರೀನಿವಾಸ ಹಾಂಡ | | ಪ್ರಾ.ಸಾ ಃ 09 |
| ತಂದೆ ಃ ಗಂಡ ಹೆಸರು | ಃ ಮಂಜು | | ಚಾ.ಸಾ ಃ 11 |
| ವಯಸ್ಸು | ಃ 60 | | |
| ಉದ್ಯೋಗ | ಃ ನಿವೃತ್ತ ಪೋಲೀಸ ನಿರೀಕ್ಷಕರು, | | |
| ವಾಸಸ್ಥಳ | ಃ ಬೆಳಗಾವಿ | | |

**ಮುಖ್ಯ ವಿಚಾರಣೆ ಃ ಎ ಪಿ ಪಿ ಅವರಿಂದ**

ನಾನು ದಿನಾಂಕ 15.07.2016 ರಿಂದ 26.07.2017 ರವರಿಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ವೃತ್ತ ನೀರಿಕ್ಷಕನಾಗಿ ಕರ್ತವ್ಯನಿರ್ವಹಿಸಿದ್ದೆನೆ.

ದಿನಾಂಕ 17.08.2017 ರಂದು ಈ ಕೇಸಿನ ತನಿಖೆಯನ್ನು ಚಾಸಾ-10 ರವರಿಂದ ವಹಿಸಿಕೊಂಡು ಕಡತ ಪರಿಶೀಲಿಸಿ, ತನಿಖೆ ಮುಂದುವರೆಸಿದ್ದು, ನಂತರ ಘಟನಾ ಸ್ಥಳಕ್ಕೆ ಹೋಗಿ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರ ಸಮಕ್ಷಮ ನಿಪಿ-7 ರಂತೆ ಮಹಜರ ಮಾಡಿ, ನಿಪಿ-8 ರಂತೆ ಕಚ್ಚಾ ನಕ್ಷೆ ತಯಾರಿಸಿದ್ದು, ಸಾಕ್ಷಿ ಸಹಿ ನಿಪಿ-7(ಬಿ) ಮತ್ತು 8(ಬಿ) ಎಂದು ಗುರುತಿಸಿದೆ. ಅದೇ ಸಮಯದಲ್ಲಿ ಚಾಸಾ-5, 6 ಮತ್ತ 7 ರವರ ಹೇಳಿಕೆ ಪಡೆದಿದ್ದು, ನಿಪಿ-2 ರಂತೆ ಪೋಟೋ ತೆಗೆಯಲಾಯಿತು. ಆರೋಪಿತರ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿದ್ದು, ಮರುದಿನ ದಿನಾಂಕ 18.08.2017 ರಂದು ನಾನೆ ಸ್ವತಃ ಆರೋಪಿ ಪತ್ತೆಗೆ ಹೋಗಿದ್ದು, ಆರೋಪಿ 1 ಮತ್ತು 3 ಇವರು ಹುಬ್ಬಳ್ಳಿ ಕಾರವಾರ ರಸ್ತೆಯ ಕಲಘಟಗಿ ಸಮೀಪ ಇರುವ ಭಾರತ ಡಾಬಾ ಸಮೀಪ ಸಿಕ್ಕಿದ್ದು, ಅವರನ್ನು ಠಾಣೆಗೆ ಕರೆತಂದು ದಸ್ತಗಿರಿ ನಿಯಮ ಅನುಸರಿಸಿ, ಸ್ವಖುಷಿ ಹೇಳಿಕೆ ಪಡೆದಿದ್ದು ಆರೋಪಿತರೊಂದಿಗೆ ಘಟನಾ ಸ್ಥಳಕ್ಕೆ ಹೋಗಿದ್ದು, ನಂತರ ಭಾರತ ಡಾಬಾ ಹತ್ತಿರ ಬಂದು ನಿಪಿ-3 ರಂತೆ ಮಹಜರ ಮಾಡಿ ಕಾರ, ಮೊಬೈಲ ಹಾಗೂ ಒಂದು ಪ್ಲಾಸ್ಟಿಕ ಹಿಡಿಕಿಯ ಚಾಕು ಹಾಗೂ ರೂ 1800/- ನ್ನು ವಶಪಡಿಸಿಕೊಂಡಿದ್ದು, ಸಾಕ್ಷಿ ಸಹಿ ನಿಪಿ-3(ಸಿ) ಎಂದು ಗುರುತಿಸಿದೆ. ಅದೇ ಸಮಯದಲ್ಲಿ ನಿಪಿ-5 ರಂತೆ ಪೋಟೋ ತೆಗೆಯಲಾಯಿತು. ನಂತರ ಸಾಕ್ಷಿದಾರರ ಪುನಃ ಹೇಳಿಕೆ ಪಡೆಯಲಾಯಿತು. ನಂತರ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಲಾಯಿತು. ದಿನಾಂಕ 08.09.2017 ರಂದು ಕಳುವಾದ ಮೋಟರ ಸೈಕಲ ಪತ್ತೆಯಾಗಿದೆ ಎಂದು ಸಿಬ್ಬಂದಿ ವಾಹನ ಹಾಜರ ಪಡಿಸಿದ್ದು, ಅವರ ಹೇಳಿಕೆ ಪಡೆದು, ಸದರಿ ವಾಹನವನ್ನು ನಿಪಿ-4 ರಂತೆ ಮಹಜರ ಮಾಡಿ

ವಶಪಡಿಸಿಕೊಳ್ಳಲಾಯಿತು. ಸಾಕ್ಷಿ ಸಹಿ ನಿಪಿ-4(ಸಿ) ಎಂದು ಗುರುತಿಸಿದೆ. ನಂತರ ನ್ಯಾಯಾಲಯದ ಆದೇಶದಂತೆ ವಾಹನಗಳನ್ನು ಸಂಬಂಧಪಟ್ಟ ಮಾಲೀಕರಿಗೆ ಅವರು ನೀಡಿದ ದಾಖಲೆಗಳನ್ನು ಪರಿಶೀಲಿಸಿ ಮುಚ್ಚಳಿಕೆ ಪಡೆದು, ಅವರ ಹೇಳಿಕೆ ಪಡೆದು ಬಿಡುಗಡೆಗೊಳಿಸಿರುತ್ತೇನೆ. ಆ ಸಮಯದಲ್ಲಿ ಮಾಡಿದ ಮಹಜರ ನಿಪಿ-9 ರಲ್ಲಿದ್ದು, ಸಾಕ್ಷಿ ಸಹಿ ನಿಪಿ-9(ಬಿ) ಎಂದು ಗುರುತಿಸಿದೆ. ಆ ಸಮಯದಲ್ಲಿ ತೆಗೆದ ಫೋಟೋ ನಿಪಿ-10 ಎಂದು ಗುರುತಿಸಿದೆ. ಕಾರನ್ನು ಬಿಡುಗೊಳಿಸುವಾಗ ಮಾಡಿದ ಮಹಜರ ನಿಪಿ-11 ಎಂದು, ಸಾಕ್ಷಿ ಸಹಿ ನಿಪಿ-11(ಎ) ಎಂದು ಗುರುತಿಸಿದೆ. ಆ ಸಮಯದಲ್ಲಿ ತೆಗೆದ ಫೋಟೋ ನಿಪಿ-12 ಎಂದು ಗುರುತಿಸಿದೆ. ಈ ಹಂತದಲ್ಲಿ ತನಿಖೆ ಮುಕ್ತಾಯಗೊಂಡಿದ್ದರಿಂದ ಮತ್ತು ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಕಂಡುಬಂದಿದ್ದರಿಂದ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಆ ಪೈಕಿ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ</u>** ಇಲ್ಲ

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.